RNU AIR DHARWAD

# JUNE 17, 2024

## AKASHAVANI - DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- ‘ಸ್ವಂತಕ್ಕಾಗಿ ಹಾಗೂ ಸಮಾಜಕ್ಕಾಗಿ ಯೋಗ’ ಧ್ಯೇಯದಡಿ, ರಾಜ್ಯಾದ್ಯಂತ ಇಂದು, 8ನೇ ದಿನದ ಯೋಗೋತ್ಸವ.
- ಜನತಾ ನ್ಯಾಯಾಲಯ; ಕಕ್ಷಿದಾರರ ಸಮಯ ಮತ್ತು ಹಣ, ಎರಡೂ ಉಳಿತಾಯ – ನ್ಯಾಯಾಧೀಶೆ ನೇರಳೆ ಭವಾನಿ.
- ಮಂಗಳೂರಿನ, ಶಿವರಾಮ ಕಾರಂತ ಪಿಲಿಕುಳ ನಿಸರ್ಗ ಧಾಮದಲ್ಲಿ, ಎರಡು ದಿನಗಳ ‘ಹಣ್ಣುಗಳ ಮೇಳ’.
- ಮುಸ್ಲಿಂ ಬಾಂಧವರಿಂದ ಇಂದು, ತ್ಯಾಗ–ಬಲಿದಾನದ ಪ್ರತೀಕವಾದ, ಬಕ್ರೀದ್ ಹಬ್ಬದಾಚರಣೆ.

<><><>

**ಈಗ ವಾರ್ತೆಗಳ ವಿವರ**

<><><>

‘ಸ್ವಂತಕ್ಕಾಗಿ ಹಾಗೂ ಸಮಾಜಕ್ಕಾಗಿ ಯೋಗ’ ಎಂಬ ಧ್ಯೇಯದಡಿ, 10ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಇದೇ 21 ರಂದು, ಶುಕ್ರವಾರ ದೇಶಾದ್ಯಂತ ಆಚರಿಸಲಾಗುತ್ತಿದೆ. ತನ್ನಿಮಿತ್ತ ಪೂರ್ವಭಾವಿಯಾಗಿ, ಹತ್ತು ದಿನಗಳ ಯೋಗೋತ್ಸವ ಇದೇ 20ರ ವರೆಗೆ ರಾಜ್ಯದ ಎಲ್ಲ 35 ಶೈಕ್ಷಣಿಕ ಜಿಲ್ಲೆಗಳಲ್ಲಿ, ವಿವಿಧ ಇಲಾಖೆಗಳ ಸಹಕಾರದಲ್ಲಿ, ಆಯುಷ್ ಇಲಾಖೆ ಆಯೋಜಿಸಿದೆ.

<><><>

ಕಳೆದ 5 ದಶಕಗಳಿಂದ ಧಾರವಾಡದಲ್ಲಿ ಉಚಿತವಾಗಿ ಯೋಗ ತರಗತಿಗಳನ್ನು ನಡೆಸುತ್ತ ಬಂದಿರುವ, 80ರ ಹರೆಯದ ಹಿರಿಯ ಯೋಗ ಗುರು, ಸದಾನಂದ ರಮಣ ಭಟ್ಕಳ ಅವರು, ಯೋಗೋತ್ಸವದಲ್ಲಿ ಪಾಲ್ಗೊಂಡಿದ್ದಾರೆ. ಯೋಗದ ಮಹತ್ವ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಅವರು ಮಾಹಿತಿ ನೀಡಿದ್ದಾರೆ.

<><><>

ಯೋಗ ಗುರು ಸದಾನಂದ ರಮಣ ಭಟ್ಟಳ್ 40 ಸೆಕೆಂದುಗಳು

<><><>

ಜುಲೈ 13 ರಂದು, ರಾಜ್ಯದ ಎಲ್ಲ ನ್ಯಾಯಾಲಯಗಳಲ್ಲಿ, ಲೋಕ ಅದಾಲತ್ ನಡೆಯಲಿದೆ. ಜನತಾ ನ್ಯಾಯಾಲಯದಲ್ಲಿ, ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳುವುದರಿಂದ, ಕಕ್ಷಿದಾರರಿಬ್ಬರಿಗೂ ಸಕಾಲಿಕ ನ್ಯಾಯ ದೊರೆತು, ಪದೇ ಪದೇ ನ್ಯಾಯಾಲಯಕ್ಕೆ ಅಲೆಯುವುದು ತಪ್ಪಿ, ನೆಮ್ಮದಿ ದೊರೆಯುತ್ತದೆ. ಸಮಯ ಮತ್ತು ಹಣವೂ ಉಳಿತಾಯವಾಗುತ್ತದೆ ಎಂದು, ಚಿಕ್ಕಬಳ್ಳಾಪುರ ಪ್ರಧಾನ ಜಿಲ್ಲಾ ನ್ಯಾಯಾಧೀಶರಾದ ನೇರಳೆ ಭವಾನಿ ಹೇಳಿದ್ದಾರೆ.

<><><>

ನ್ಯಾಯಾಧೀಶೆ ನೇರಳೆ ಭವಾನಿ ಧ್ವನಿ 27 ಸೆಕೆಂದುಗಳು

<><><>

ಬಳ್ಳಾರಿ ಜಿಲ್ಲೆ, ಸಂಡೂರಿನ ದೇವದಾರಿ ಕಬ್ಬಿಣದ ಅದಿರು ಗಣಿಗಾರಿಕೆಗೆ, ಕೇಂದ್ರದ ಉಕ್ಕು ಮತ್ತು ಕೈಗಾರಿಕೆ ಖಾತೆ ಸಚಿವರಾಗಿ, ತಾವು ಆತುರದಲ್ಲಿ ನಿರ್ಧರಿಸಿ ಕಡತಕ್ಕೆ ಸಹಿ ಹಾಕಿಲ್ಲ ಎಂದು, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ. ಮಂಡ್ಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುದುರೆಮುಖ ಐರನ್ ಓರ್ ಕಂಪೆನಿ – ಕೆ.ಐ.ಓ.ಸಿ.ಎಲ್.ನ, ರಾಜ್ಯಕ್ಕೆ ಸಂಬಂಧಿಸಿದ ಒಂದು ಯೋಜನೆಗೆ ಚಾಲನೆ ನೀಡುವ ದೃಷ್ಟಿಯಿಂದ, ಸಹಿ ಮಾಡಿದ್ದಾಗಿ ತಿಳಿಸಿದರು. ಈ ಯೋಜನೆಯಿಂದ ಅರಣ್ಯ ನಾಶವಾಗುತ್ತದೆ ಎಂಬುದು ತಪ್ಪು ಕಲ್ಪನೆ. ಸಾವಿರಾರು ಮಂದಿಗೆ ಉದ್ಯೋಗ ಸೃಷ್ಟಿಸುವ ಉದ್ದೇಶದಿಂದ, ಯೋಜನೆಗೆ ಸಹಿ ಮಾಡಿದ್ದಾಗಿ, ಅವರು ಹೇಳಿದರು.

<><><>

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಪಂಚಖಾತ್ರಿ ಯೋಜನೆಗಳಲ್ಲಿ ಒಂದಾದ, 'ಸ್ತ್ರೀ ಶಕ್ತಿ' ಯೋಜನೆಗೆ, ಹಾವೇರಿ ಜಿಲ್ಲೆಯಲ್ಲಿ ಉತ್ತಮ ಸ್ಪಂದನೆ ದೊರೆತಿದೆ. ಕಳೆದ ಒಂದು ವರ್ಷದಲ್ಲಿ, 5 ಕೋಟಿ 84 ಲಕ್ಷ ಮಹಿಳೆಯರು, 171 ಕೋಟಿ 15 ಲಕ್ಷ ರೂಪಾಯಿ ಮೊತ್ತದ, 'ಸ್ತ್ರೀ ಶಕ್ತಿ' ಟಿಕೆಟ್ ಖರೀದಿಸಿ, ಉಚಿತವಾಗಿ ಬಸ್ ಪ್ರಯಾಣ ಮಾಡಿದ್ದಾರೆ ಎಂದು, ಹಾವೇರಿ ವಿಭಾಗೀಯ ಸಾರಿಗೆ ವ್ಯವಸ್ಥಾಪಕ, ಶಶಿಧರ ಕುಂಬಾರ ಮಾಹಿತಿ ನೀಡಿದ್ದಾರೆ.

<><><>

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ, ಕೌನ್ಸಲಿಂಗ್ ಮೂಲಕ ನೌಕರರ ವರ್ಗಾವಣೆ ಪ್ರಕ್ರಿಯೆ ನಡೆಸಲು, ಸರ್ಕಾರ ತೀರ್ಮಾನಿಸಿದೆ ಎಂದು, ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಈ ಸಂಬಂಧ ಸುತ್ತೋಲೆ ಹೊರಡಿಸಿರುವ ಆರೋಗ್ಯ ಇಲಾಖೆ, ಮೂರು ವರ್ಷ ಸೇವಾವಧಿ ಪೂರೈಸಿರುವ ವೈದ್ಯರು, ನಾಲ್ಕು ವರ್ಷ ಪೂರೈಸಿರುವ, ಬಿ ವೃಂದದ ನೌಕರರು, 5 ವರ್ಷ ಪೂರೈಸಿರುವ ಸಿ ವೃಂದ ಹಾಗೂ 7 ವರ್ಷ ಸೇವಾವಧಿ ಪೂರೈಸಿರುವ, ಡಿ ವೃಂದದ ನೌಕರರ ಮಾಹಿತಿಯನ್ನು, ಈ ಮಾಸಾಂತ್ಯದೊಳಗೆ ನೀಡುವಂತೆಯೂ ಇಲಾಖೆಗೆ ಸೂಚಿಸಲಾಗಿದೆ ಎಂದು, ಸಚಿವರು ಹೇಳಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಮಂಗಳೂರು ಹೊರವಲಯದ ಡಾಕ್ಟರ್ ಶಿವರಾಮ ಕಾರಂತ ಪಿಲಿಕುಳ ನಿಸರ್ಗ ಧಾಮದಲ್ಲಿ, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ, ಇದೇ 22 ಹಾಗೂ 23, ಶನಿವಾರ ಮತ್ತು ಭಾನುವಾರದಂದು, 'ಹಣ್ಣುಗಳ ಮೇಳ'ವನ್ನು ಆಯೋಜಿಸಿದೆ. ಈ ಮೇಳದಲ್ಲಿ ಪ್ರಾದೇಶಿಕ ಹಲಸು, ಮಾವು ಸೇರಿದಂತೆ, ಇತರೆ ಕಾಡು ಹಣ್ಣುಗಳು, ರಾಜ್ಯದ ವಿವಿಧೆಡೆಯ ಮೌಲ್ಯವರ್ಧಿತ ಕಸಿ ಗಿಡಗಳು, ಹಣ್ಣುಗಳನ್ನು, ಬೆಳೆಗಾರರು ತಂದು ಮಾರಾಟ ಮಾಡಲಿದ್ದಾರೆ. ಹಣ್ಣುಗಳಿಂದ ತಯಾರಿಸಲ್ಪಡುವ ವಿವಿಧ ಖಾದ್ಯಗಳು ಹಾಗೂ ಪಾನೀಯಗಳ ಪ್ರದರ್ಶನ ಮತ್ತು ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ತಿಳಿಸಿದ್ದಾರೆ.

<><><>

ಇಂದು ಮುಸ್ಲಿಂ ಬಾಂಧವರು, ಸಮಾಜದ ಒಳಿತಿಗಾಗಿ, ತ್ಯಾಗ ಬಲಿದಾನದ ಪ್ರತೀಕವಾದ ಬಕ್ರೀದ್ ಹಬ್ಬವನ್ನು, ಶ್ರದ್ಧಾ ಭಕ್ತಿಯಿಂದ ಆಚರಿಸಲಿದ್ದಾರೆ. ಇಸ್ಲಾಮಿಕ್ ಕ್ಯಾಲೆಂಡರ್ ಪ್ರಕಾರ, ಹನ್ನೆರಡನೇ ತಿಂಗಳು, ಧುಲ್ ಹಿಜ್ಜಾದ್, ಹತ್ತನೇ ದಿನದಂದು, ಬಕ್ರೀದ್ ಆಚರಿಸಲಾಗುತ್ತದೆ. ಈದ್ಗಾ ಹಾಗೂ ಮಸೀದಿಗಳಲ್ಲಿ, ಸಾಮೂಹಿಕವಾಗಿ ಈ ಬೆಳಗ್ಗೆ ವಿಶೇಷ ಪ್ರಾರ್ಥನೆ – ನಮಾಜ್ ಸಲ್ಲಿಸಲಾಗುತ್ತಿದೆ. ಬಳಿಕ, ಶುಭಾಶಯಗಳನ್ನು ವಿನಿಮಯಿಸಿಕೊಂಡು, ಬಂಧು ಮಿತ್ರರೊಡನೆ ವಿಶೇಷ ಭಕ್ಷ್ಯಗಳನ್ನು ಸವಿಯುವ, ಈದ್–ಉಲ್–ಅಧಾ ಜರುಗಲಿದೆ.

<><><>

ಇದೇ ತಿಂಗಳಾಂತ್ಯದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿಜಯನಗರ ಜಿಲ್ಲೆಗೆ ಭೇಟಿ ನೀಡಿ, ತ್ರೈಮಾಸಿಕ ಕೆ.ಡಿ.ಪಿ. ಸಭೆ ನಡೆಸಲಿದ್ದಾರೆ. ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಜಿಲ್ಲಾಡಳಿತ ಭವನದಲ್ಲಿ, ಪೂರ್ವ ಸಿದ್ಧತೆ ಸಭೆ ನಡೆಸಿದರು. ಮುಖ್ಯಮಂತ್ರಿಯವರು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸುತ್ತಿರುವುದು, ಜಿಲ್ಲೆಯ ಪ್ರಗತಿಯ ಇತಿಹಾಸದಲ್ಲಿ ಹೊಸ ಮೈಲುಗಲ್ಲಾಗಲಿದೆ ಎಂದು ತಿಳಿಸಿದರು.

<><><>

ಕೃಷ್ಣ ಹಾಗೂ ಭೀಮಾ ನದಿ ಪಾತ್ರಗಳ, ಗ್ರಾಮಗಳ ಜನ ಮತ್ತು ಜಾನುವಾರುಗಳ ಸುರಕ್ಷತೆಗಾಗಿ, ಮುಂಜಾಗ್ರತಾ ಕ್ರಮ ಕೈಗೊಳ್ಳಲು, ನೋಡಲ್ ಅಧಿಕಾರಿಗಳನ್ನು, ಯಾದಗಿರಿ ಜಿಲ್ಲಾಧಿಕಾರಿ ಡಾಕ್ಟರ್ ಬಿ. ಸುಶೀಲಾ ನೇಮಿಸಿದ್ದಾರೆ. ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳ ಸಮನ್ವಯ ಸಭೆಯ ಅಧ್ಯಕ್ಷತೆವಹಿಸಿ, ಅವರು ಮಾತನಾಡಿದರು. ಸಂಭವನೀಯ ಪ್ರವಾಹವನ್ನು ಎದುರಿಸಲು, ಅಗ್ನಿಶಾಮಕ ದಳ, ಆರೋಗ್ಯ ಇಲಾಖೆ ಮತ್ತು ಪೊಲೀಸ್ ಇಲಾಖೆ ಪೂರ್ವಸಿದ್ಧತೆ ಕೈಗೊಳ್ಳಬೇಕು. ತುರ್ತು ಪರಿಸ್ಥಿತಿ ನಿಭಾಯಿಸಲು ಕಾಳಜಿ ಕೇಂದ್ರ ಸನ್ನದ್ಧವಾಗಿರಿಸುವಂತೆ, ಜಿಲ್ಲಾಧಿಕಾರಿ ಸೂಚಿಸಿದರು.

<><><>

ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯ, 12 ರಿಂದ 18 ವ ’ದೊಳಗಿನ ವಿದ್ಯಾರ್ಥಿಗಳಿಗೆ, 32ನೇ ಯುವ ಸಂಘಟನೆ ಆಯೋಜಿಸಲು ಉದ್ದೇಶಿಸಿದೆ. ಇಂದು, ಸೋಮವಾರ 17 ರಿಂದ ದಿನಾಂಕ 22ರ ವರೆಗೆ, ಮೃಗಾಲಯದ ಕಚೇರಿಯಿಂದ ಅರ್ಜಿ ಪಡೆದು, ಶಿಬಿರದ ಶುಲ್ಕ ಪಾವತಿಸಿ, ಹೆಸರು ನೊಂದಾಯಿಸಬಹುದು.

<><><>

ಆಕಾಶವಾಣಿಯಲ್ಲಿ ಜನಪ್ರಿಯ 'ಮನ್ ಕಿ ಬಾತ್' ಕಾರ್ಯಕ್ರಮ, ಇದೇ ತಿಂಗಳ 30ರಂದು, 111 ನೇ ಸಂಚಿಕೆ ಪ್ರಸಾರವಾಗಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ತಮ್ಮ ಮನದ ಮಾತನ್ನು ದೇಶ, ವಿದೇಶಗಳ ಜನತೆಯೊಂದಿಗೆ, ಹಂಚಿಕೊಳ್ಳಲಿದ್ದಾರೆ. ಸತತ ಮೂರನೇ ಅವಧಿಗೆ ಪ್ರಧಾನಮಂತ್ರಿಯಾಗಿ, ನರೇಂದ್ರ ಮೋದಿಯವರು ಆಯ್ಕೆಯಾದ ನಂತರ, ಪ್ರಸಾರವಾಗಲಿರುವ ಮೊದಲ ಸಂಚಿಕೆಯಾಗಿದೆ.

ಟೋಲ್ ಫ್ರೀ ಸಂಖ್ಯೆ 1800-11-70800, ನಮೋ ಆ್ಯಪ್ ಅಥವಾ ಮೈ ಜಿ.ಒ.ವಿ ಡಾಟ್ ಇನ್ ಮೂಲಕ, ಇದೇ 28ರ ವರೆಗೆ ಜನತೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಬಹುದು.

<><><>

ಭಾರತೀಯ ಸೇನೆ ಸೇರ ಬಯಸುವ, ಹಿಂದುಳಿದ ವರ್ಗಗಳ ಅರ್ಹ ಅಭ್ಯರ್ಥಿಗಳಿಗೆ, ಉಚಿತವಾಗಿ ಆಯ್ಕೆಯ ಪೂರ್ವ ಸಿದ್ಧತೆ ಬಗ್ಗೆ, ವೃತ್ತಿ ಮಾರ್ಗದರ್ಶನ ಹಾಗೂ ತರಬೇತಿ ನೀಡಲು, ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಜುಲೈ 10 ಅರ್ಜಿ ಸಲ್ಲಿಸಲು ಕೊನೆಯ ದಿನ. ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಮಾತ್ರ ತರಬೇತಿ ನೀಡಲಾಗುತ್ತಿದೆ. ಹೆಚ್ಚಿನ ಮಾಹಿತಿಗೆ bcwd.karnataka.gov.in ಜಾಲತಾಣಕ್ಕೆ ಭೇಟಿ ನೀಡಬಹುದು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಪೆಟ್ರೋಲ್-ಡೀಸೆಲ್ ಬೆಲೆ ಇಳಿಸಲು ಆಗ್ರಹಿಸಿ, ಇಂದು ರಾಜ್ಯಾದ್ಯಂತ ಬಿಜೆಪಿ ಪ್ರತಿಭಟನೆ ನಡೆಸಲಿದೆ ಎಂದು, ಬಿ.ವೈ.ವಿಜಯೇಂದ್ರ ಹಾಸನದಲ್ಲಿ ತಿಳಿಸಿದ್ದಾರೆ.

<><><>

ಕರ್ನಾಟಕ ಎಂದು ನಾಮಕರಣಗೊಂಡು, 50 ವರ್ಷ ತುಂಬಿದ ನಿಮಿತ್ತ, ಕರ್ನಾಟಕ ಸಂಭ್ರಮ-50 ರ ಜ್ಯೋತಿ ರಥ ಯಾತ್ರೆಗೆ, ಧಾರವಾಡದಲ್ಲಿ ಅದ್ದೂರಿ ಸ್ವಾಗತ ಕೋರಲಾಯಿತು.

<><><>

ಬೆಂಗಳೂರು ಸಗಟು ಜವಳಿ ವ್ಯಾಪಾರ ಸಂಘದ, ಹೊಸ ವರ್ತಕರ ಕೈಪಿಡಿಯನ್ನು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ಬಿಡುಗಡೆ ಮಾಡಿ, ಸಾಧಕರನ್ನು ಸನ್ಮಾನಿಸಿದರು.

ರೈತರ ಪಹಣಿಗೆ ಆಧಾರ್ ಜೋಡಿಸುವಲ್ಲಿ, ದಾವಣಗೆರೆ ಜಿಲ್ಲೆ ರಾಜ್ಯ ಮಟ್ಟದಲ್ಲಿ ಮೂರನೇ ಸ್ಥಾನ ಪಡೆದಿದೆ ಎಂದು, ಜಿಲ್ಲಾಧಿಕಾರಿ ಡಾಕ್ಟರ್ ಎಂ.ವಿ.ವೆಂಕಟೇಶ್ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 'ಸ್ವಂತಕ್ಕಾಗಿ ಹಾಗೂ ಸಮಾಜಕ್ಕಾಗಿ ಯೋಗ' ಧ್ಯೇಯದಡಿ, ರಾಜ್ಯಾದ್ಯಂತ ಇಂದು, 8ನೇ ದಿನದ ಯೋಗೋತ್ಸವ.
- ಜನತಾ ನ್ಯಾಯಾಲಯ; ಕಕ್ಷಿದಾರರ ಸಮಯ ಮತ್ತು ಹಣ, ಎರಡೂ ಉಳಿತಾಯ - ನ್ಯಾಯಾಧೀಶೆ ನೇರಳೆ ಭವಾನಿ.

- ಮಂಗಳೂರಿನ, ಶಿವರಾಮ ಕಾರಂತ ಪಿಲಿಕುಳ ನಿಸರ್ಗ ಧಾಮದಲ್ಲಿ, ಎರಡು ದಿನಗಳ ‘ಹಣ್ಣುಗಳ ಮೇಳ’.
- ಮುಸ್ಲಿಂ ಬಾಂಧವರಿಂದ ಇಂದು, ತ್ಯಾಗ–ಬಲಿದಾನದ ಪ್ರತೀಕವಾದ, ಬಕ್ರೀದ್ ಹಬ್ಬದಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ